

# ಸಿರಿ–ಸಮೃದ್ಧಿಯ ಗೋಪುರ ಟವರ್ ಆಫ್ ಲಂಡನ್

ಲಂಡನ್‌ನ 'ಟವರ್ ಆಫ್ ಲಂಡನ್' ತಾನು ಹೊಂದಿರುವ ವೈಭವೋಪೇತ ಸಂಪತ್ತು, ಚಾರಿತ್ರಿಕ ಮಹತ್ವ ಹಾಗೂ ವಿಶಿಷ್ಟ ಆಚರಣೆಗಳಿಂದ ಪ್ರವಾಸಿಗರ ಗಮನಸೆಳೆಯುತ್ತದೆ. ಬ್ರಿಟಿಷ್ ರಾಜಪ್ರಭುತ್ವದ ಒಂದು ಅಪೂರ್ವ ಅಧ್ಯಾಯ ಈ ಪಾರಂಪರಿಕ ವಾಸ್ತುಶಿಲ್ಪ.

■ ಡಿ.ಜಿ. ಮಲ್ಲಿಕಾರ್ಜುನ

ಮಧ್ಯಯುಗದ ಕಾಲದಲ್ಲಿ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಕೊಲ್ಲೂರು ಗಣಿಯಲ್ಲಿ ದೊರೆತಿದ್ದ ಕೊಹಿನೂರ್ ವಜ್ರವನ್ನು ಜಗತ್ತಿನ ಅತಿ ದೊಡ್ಡ ವಜ್ರ ಎಂದು ಪರಿಗಣಿಸಲಾಗಿದೆ. ಕಾಕತೀಯ ಅರಸರ ಆರಾಧ್ಯ ದೇವತೆಯ ಕಣ್ಣಿನಂತೆ ಈ ಕೊಹಿನೂರು ವಜ್ರವನ್ನು ಭಕ್ತಿಯಿಂದ ಕಾಣಲಾಗುತ್ತಿತ್ತು. ಸಿಖ್ ದೊರೆ ಮಹಾರಾಜ ರಣಜಿತ್ ಸಿಂಗ್ ಪಾಲಾದ ಈ ವಜ್ರ ನಂತರ ಬ್ರಿಟಿಷರ ಕೈಸೇರಿತು. ಸದ್ಯ ಅದು ರಾಣಿ ಎರಡನೇ ಎಲಿಝಬೆತ್ ಕಿರೀಟದಲ್ಲಿದೆ. 105 ಕ್ಯಾರೆಟ್ ತೂಗುವ ಈ ದುಬಾರಿ ವಜ್ರ ಅರಸರ ಕೈ ಸೇರುವುದಕ್ಕೂ 800 ವರ್ಷಗಳ ಮುಂಚೆ ದೊರೆತಿದ್ದು ಎನ್ನಲಾಗಿದೆ. 'ಟವರ್ ಆಫ್ ಲಂಡನ್'ನಲ್ಲಿ ಸಾರ್ವಜನಿಕ ಪ್ರದರ್ಶನಕ್ಕಿಟ್ಟಿರುವ ಈ ವಜ್ರದ ಬೆಲೆ ಸುಮಾರು 100 ದಶಲಕ್ಷ ಯುರೋಗಳು ಎಂದು ಅಂದಾಜಿಸಲಾಗಿದೆ.

ಲಂಡನ್ನಿನ ಅತೀ ಮಹತ್ವದ ಐತಿಹಾಸಿಕ ಸ್ಥಳ 'ಟವರ್ ಆಫ್ ಲಂಡನ್'. ಇಂಗ್ಲೆಂಡಿನ ಇತಿಹಾಸ ಇದರೊಂದಿಗೆ ಬೆರೆತಿದೆ. ಥೇಮ್ಸ್ ನದಿ ದಡದ ಮೇಲೆ ಹದಿನಾಲ್ಕು ಎಕರೆ ಪ್ರದೇಶದ ಈ ಕೋಟೆಯಲ್ಲಿ ಅರಮನೆಗಳು, ಚಾಪೆಲ್‌ಗಳು, ಹಸಿರು ಉದ್ಯಾನವಿದೆ. 11ನೇ ಶತಮಾನದಿಂದ ಇಲ್ಲಿ ನಡೆದ ರಾಜಕೀಯ ಬೆಳವಣಿಗೆಗಳು, ಕೊಲೆ, ಸುಲಿಗೆ, ಲೂಟಿಗೆ ಈ ಕಲ್ಲು ಕಟ್ಟಡ ಮೂಕಸಾಕ್ಷಿಯಾಗಿದೆ.

ವಿಲಿಯಮ್ ಹೆಸರಿನ ರಾಜ ಕಟ್ಟಿಸಿದ 'ವೈಟ್ ಟವರ್' ಎಂಬ ಕೋಟೆಯನ್ನು ನಂತರದ ರಾಜರು ತಮಗೆ ಅನುಕೂಲವಾಗುವಂತೆ ಮಾರ್ಪಡಿಸಿದರು. ಹೊಸ ಕಟ್ಟಡಗಳನ್ನು ನಿರ್ಮಿಸಿದರು. ಕ್ವೀನ್ ಹೌಸ್, ಮಾರ್ಟಿನ್ ಟವರ್, ಬ್ಲಡ್ ಟವರ್ ಎಂಬೆಲ್ಲಾ ಹೆಸರುಗಳಿಂದ ಅವನ್ನು ಕರೆಯುತ್ತಾರೆ.

ಬ್ರಿಟಿಷ್ ಅರಸು ಮನೆತನಗಳ ಮುತ್ತು, ರತ್ನ, ಬೆಳ್ಳಿ, ಬಂಗಾರ, ವಜ್ರಖಚಿತ ಆಭರಣಗಳು, ಆಯುಧಗಳು, ವಿಶೇಷ ವಸ್ತುಗಳು, ರಾಜಪೋಷಾಕುಗಳ ಖಜಾನೆಯಿಲ್ಲಿದೆ. ಕೊಹಿನೂರ್ ವಜ್ರವನ್ನು ಸಹ ಇಲ್ಲಿ ಪ್ರದರ್ಶಿಸಲಾಗಿದೆ. ಇತಿಹಾಸದ ಕಣಜವೆನ್ನಬಹುದಾದ ಇಲ್ಲಿ ರಾಜರ ಅರಮನೆ, ಜೈಲು, ಶಿಕ್ಷೆಯ ತಾಣ, ವಿವಿಧ ಆಯುಧಗಳ ಉಗ್ರಾಣ, ಬ್ರಿಟಿಷರು ಬೇರೆ ಬೇರೆ ದೇಶಗಳಿಂದ ಕೊಳ್ಳೆ ಹೊಡೆದು ತಂದ ಅಮೂಲ್ಯ ಸಾಮಗ್ರಿಗಳು ಎಲ್ಲವೂ ಸುಭದ್ರವಾಗಿವೆ. 'ಕ್ರೌನ್ ಆಫ್



ಕೊಹಿನೂರ್ ವಜ್ರವಿರುವ ರಾಣಿ ಅಲೆಕ್ಸಾಂಡ್ರಾಳ ಕಿರೀಟ